# ವಿದ್ಯುಚ್ಛಕ್ತಿ ಲೋಕಪಾಲರ ಸಮಕ್ಷಮದಲ್ಲಿ

ಸಂಖ್ಯೆ: 16, ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, (ಜೈನ್ ಆಸ್ಪತ್ರೆ ಹಿಂಭಾಗ),
ವಸಂತನಗರ, ಬೆಂಗಳೂರು–560052.

**ಉಪಸ್ಥಿತಿ: ಶ್ರೀಮತಿ ಆರ್. ಶಾರದ,**
**ವಿದ್ಯುಚ್ಛಕ್ತಿ ಲೋಕಪಾಲರು**

**ಪ್ರಕರಣ ಸಂಖ್ಯೆ: OMB/C/G-491/2022**

**ಆದೇಶ ದಿನಾಂಕ: 26/08/2022**

ಶ್ರೀಮತಿ ವೇದಾವತಿ,
ನಂ. 203/ಬಿ, ಕೆ.ಹೆಚ್.ಬಿ. ಕಾಲೋನಿ,
ಆರ್.ಎಮ್.ಪಿ. ಕ್ವಾರ್ಟರ್ಸ್ ಎದುರು,
ಕುವೆಂಪುನಗರ,
ಮೈಸೂರು.

**ಪ್ರತಿನಿಧಿಸುವವರು:**
ಶ್ರೀ ಸಿ. ಆರ್. ಅಶ್ವಥ್ ನಾರಾಯಣ,
ಹಿಂದುಸ್ಥಾನ್ ಎಲೆಕ್ಟ್ರಿಕಲ್ಸ್,
ಬಾಪು ಸುಬ್ಬರಾವ್ ರಸ್ತೆ,
ಶಿವರಾಮಪೇಟೆ,
ಮೈಸೂರು – 570001. – ದೂರುದಾರರು/ಮೇಲ್ಮನವಿದಾರರು

V/S

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನ ಕುವೆಂಪುನಗರ ಉಪ ವಿಭಾಗ, ಸೆಸ್ಕಾಂ,
ಜೋಡಿ ಬಸವ ರಸ್ತೆ,
ಮೈಸೂರು – 570023.
(ಸ್ವತಃ)

2. ಜನರಲ್ ಮ್ಯಾನೇಜರ್ (Procurement),
ಕಾರ್ಪೊರೇಟ್ ಕಛೇರಿ,
ವಿಜಯನಗರ 2ನೇ ಹಂತ,
ಮೈಸೂರು – 570017.

3. ಅಧ್ಯಕ್ಷರು,
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರ್ಯ ಮತ್ತು ಪಾಲನ ವೃತ್ತ,
ಜೋಡಿ ಬಸವ ರಸ್ತೆ, ಕುವೆಂಪುನಗರ,
ಮೈಸೂರು – 570023. – ಪ್ರತಿವಾದಿಗಳು

ಈ ಮೇಲ್ಮನವಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ (ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಮತ್ತು ಲೋಕಪಾಲ) ನಿಯಮಗಳ ಅಡಿಯಲ್ಲಿ, ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಮೈಸೂರು, ಪ್ರಕರಣ ಸಂಖ್ಯೆ 24/2022-23 ಆದೇಶ ಸಂಖ್ಯೆ: ಅಇಂ(ವಿ)/ಕಾನಿಇಂ(ಕ)/ಸಕಾನಿಇಂ(ಕ)/22-23/CYS-25, ಇವರ ಆದೇಶ ದಿನಾಂಕ 27.04.2022ರ ವಿರುದ್ಧ ದಾಖಲಿಸಲಾಗಿದೆ.

1) ಈ ಪ್ರಕರಣದ ಸಾರಾಂಶವೇನೆಂದರೆ, ದೂರುದಾರ/ಅಪೀಲುದಾರರು ಮೈಸೂರು ಜಿಲ್ಲೆ, ಕುವೆಂಪು ನಗರ, ಕೆ.ಹೆಚ್.ಬಿ ಕಾಲೋನಿಯಲ್ಲಿರುವ ಮನೆ ನಂ. 203/B ಕಟ್ಟಡಕ್ಕೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆಂದು, ಇದರ RR No. KATP 16850 ಆಗಿರುತ್ತದೆಂದು, ಈ ವಿದ್ಯುತ್ ಸಂಪರ್ಕವನ್ನು ಗ್ರಾಹಕರು ಒಂದನೇ ಎದುರುದಾರರಿಂದ ಪಡೆದುಕೊಂಡಿದ್ದರೆಂದು, ಈ ರೀತಿ ನೀಡಿರುವ ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕೆ ವಿದ್ಯುತ್ ಮಂಜೂರಾತಿ ಪತ್ರದಲ್ಲಿ ರೂ. 6,993/-ಗಳನ್ನು MSDಯಾಗಿ ಪಾವತಿಸುವಂತೆ ತಿಳಿಸಲಾಗಿದೆಯೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ನಿಯಮಗಳಲ್ಲಿ/ಆದೇಶಗಳನ್ನು/ ನಿರ್ದೇಶನಗಳಲ್ಲಿ ತಿಳಿಸದೇ ಇರುವಂತಹ ರೂ. 6,993/-ಗಳನ್ನು MSDಯಾಗಿ ಪಾವತಿಸುವಂತೆ ತಿಳಿಸಿರುವುದು ನಿಯಮಗಳಿಗೆ ವಿರುದ್ಧವಾಗಿರುತ್ತದೆಂದು, ಒಂದನೇ ಎದುರುದಾರರು ನೀಡಿರುವ ವಿದ್ಯುತ್ ಮಂಜೂರಾತಿ ಪತ್ರದಲ್ಲಿ ರೂ. 6,993/-ಗಳನ್ನು MSDಯಾಗಿ ಪಾವತಿಸುವಂತೆ ತಿಳಿಸಲು ನಿಗಮ ಕಛೇರಿಯ GM (Procurement), CESC, ಮೈಸೂರುರವರ ಕಛೇರಿಯಿಂದ ದಿನಾಂಕ 26.02.2019ರಂದು ನೀಡಿದ ಸುತ್ತೋಲೆ (CESC/GM(P)/AGM(P-1)2018-19/CYS-1669ಯನ್ನು ಆಧರಿಸಿರುತ್ತಾರೆಂದು, ನುಡಿದಿರುತ್ತಾರೆ.

ಅದಕ್ಕಾಗಿ ತಾವು ನ್ಯಾಯ ಕೋರಿ ಮೂರನೇ ಪ್ರತಿವಾದಿ/ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆರವರಿಗೆ ದೂರು ಸಲ್ಲಿಸಿದ್ವೆಂದು ನುಡಿದಿರುತ್ತಾರೆ.

2) ಮತ್ತೆ ಮುಂದುವರೆದು ಮೂರನೇ ಎದುರದಾರರು/ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯ ಅಧಿಕಾರಿಗಳು ಯಾವುದೇ ವಿಚಾರಣೆಯನ್ನು ಕ್ರಮಬದ್ಧವಾಗಿ ನಡೆಸದೇ ಪ್ರಶ್ನಿತ ಆದೇಶವನ್ನು ಹೊರಡಿಸಿರುತ್ತಾರೆಂದು, ಆದ್ದರಿಂದ ಪ್ರಸ್ತುತ ಅಪೀಲನ್ನು ತಾವು ಸಲ್ಲಿಸಿರುತ್ತೇವೆಂದು, ತಮ್ಮ ಹೇಳಿಕೆಗಳನ್ನು ಪರಿಗಣಿಸಿ ಒಂದನೇ ಎದುರುದಾರರು ತಮ್ಮ ಕಛೇರಿಯಿಂದ ನೀಡಿರುವ ವಿದ್ಯುತ್ ಮಂಜೂರಾತಿ ಪತ್ರದಲ್ಲಿ ರೂ. 6,993/-ಗಳನ್ನು MSDಯಾಗಿ ಪಾವತಿಸುವಂತೆ ತಿಳಿಸಿರುವುದನ್ನು ತೆಗೆದು ಹಾಕಬೇಕೆಂದೂ ಮತ್ತು ತಮ್ಮ ಅಪೀಲನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

3) ಅಪೀಲನ್ನು ನೋಂದಣಿ ಮಾಡಿಕೊಂಡ ನಂತರ ಈ ಪ್ರಾಧಿಕಾರವು ಉಭಯಪಕ್ಷಕಾರರಿಗೆ ಈ ಪ್ರಾಧಿಕಾರದ ಮುಂದೆ ಹಾಜರಾಗುವಂತೆ ತಿಳುವಳಿಕೆ ನೋಟೀಸನ್ನು ನೀಡಿರುತ್ತದೆ. ಅದರಂತೆ ಮೇಲ್ಮನವಿದಾರರು ತಮ್ಮ ಅಧಿಕೃತ ಪ್ರತಿನಿಧಿರವರ ಮೂಲಕ ಹಾಜರಾಗಿರುತ್ತಾರೆ ಹಾಗೂ ಒಂದನೇ ಪ್ರತಿವಾದಿ ತಾವೇ ಖುದ್ದಾಗಿ ಹಾಜರಾಗಿರುತ್ತಾರೆ ಮತ್ತು ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ.

4) ಸದರಿ ತಕರಾರಿನಲ್ಲಿ ಒಂದನೇ ಪ್ರತಿವಾದಿಯು ದಿನಾಂಕ 19.02.2022ರಂದು ಅಪೀಲುದಾರರಾದ ಶ್ರೀಮತಿ ವೇದಾವತಿರವರ ಕಟ್ಟಡಕ್ಕೆ 2KW ಭಾರದ ತಾತ್ಕಾಲಿಕ ವಿದ್ಯುತ್ ಸಂಪರ್ಕದ ಮಂಜೂರಾತಿಯನ್ನು ನೀಡಲಾಗಿತ್ತೆಂದು, ಈ ರೀತಿ ನೀಡಿದ ಮಂಜೂರಾತಿ ಪತ್ರದಲ್ಲಿ ಮೀಟರ್ ಸೆಕ್ಯೂರಿಟಿ ಡೆಪಾಸಿಟ್

(Meter Security Deposit) ಹಣದ ರೂಪದಲ್ಲಿ ರೂ. 6,993/-ಗಳನ್ನು ಪಾವತಿಸುವಂತೆ ತಿಳಿಸಲಾಗಿತ್ತೆಂದು, ಅದಕ್ಕಾಗಿ ನಿಗಮ ಕಛೇರಿ ಸುತ್ತೋಲೆಯಂತೆ (CESC/GM(P)/AGM(P-1)2018-19/CYS-1669 ದಿನಾಂಕ 26.02.2019, ಹಣ ಪಾವತಿ ಮಾಡಲು ತಿಳಿಸಲಾಗಿತ್ತೆಂದು ಆದರೇ ಈವರೆಗೂ ಅಪೀಲುದಾರರು ಸದರಿ MSD ಮೊತ್ತವನ್ನು ಪಾವತಿ ಮಾಡಿಲ್ಲವೆಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, Conditions of Supply of Electricity of Distributions Licensee in the State of Karnataka, Clause 30.04ರ ಪ್ರಕಾರ ಮಾಪಕ ಶುಲ್ಕವನ್ನು ಪಾವತಿಸಿಕೊಳ್ಳಲು ಅವಕಾಶ ಇರುತ್ತದೆಂದು ಅದರಿಂತೆ LT ಸ್ಥಾವರಗಳಿಗೆ ಪ್ರಿಪೇಡ್ (prepaid) ಅಳವಡಿಸಿಕೊಳ್ಳಲು ದಿನಾಂಕ 26.02.2019ರಂದು ತಮ್ಮ ಕಛೇರಿಯಿಂದ ಸುತ್ತೋಲೆಯನ್ನು ಹೊರಡಿಸಲಾಗಿತ್ತೆಂದು, ಅಷ್ಟೇ ಅಲ್ಲದೇ OP 34/2015 ಮತ್ತು OP 89/2017 ಈ ಪ್ರಕರಣಗಳಲ್ಲಿ ನೀಡಲಾದ ಆದೇಶಗಳು ಕೂಡ ತಾತ್ಕಾಲಿಕ ಸ್ಥಾವರಗಳಿಗೆ MSD ಪಾವತಿ ಮಾಡಿಸಿಕೊಳ್ಳುವುದು ಸರಿಯಾಗಿದೆ ಎಂಬುದಾಗಿ ತಿಳಿಯಪಡಿಸುತ್ತವೆ ಎಂದು, ಆದ್ದರಿಂದ ಅಪೀಲುದಾರರಿಗೆ MSD ಮೊತ್ತವನ್ನು ಪಾವತಿ ಮಾಡಲು ಸ್ಪಷ್ಟವಾಗಿ ಸೂಚನೆ ನೀಡಲಾಗಿತ್ತೆಂದು, ಆದರೇ ಅಪೀಲುದಾರರು ಗ್ರಾಹಕ ಕುಂದುಕೊರತೆಗಳ ನಿವಾರಣಾ ವೇದಿಕೆರವರಿಗೆ ದೂರು ಸಲ್ಲಿಸಿದ್ದರೆಂದು, ಸದರಿ ಗ್ರಾಹಕ ವೇದಿಕೆಯು ಸಹ ದಿನಾಂಕ 27.04.2022ರಂದು ಆದೇಶವನ್ನು ಹೊರಡಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, Conditions of Supply of Electricity of Distribution Licensee in the State of Karnataka ನಿಬಂಧನೆ 30.04ರ ಅನ್ವಯ ಹಾಗೂ ನಿಗಮ ಕಛೇರಿ ಸುತ್ತೋಲೆ ದಿನಾಂಕ 26.02.2019ರ ಅನ್ವಯ ಮಂಜೂರಾತಿ ಪತ್ರ ನೀಡಿರುವುದು ಸೂಕ್ತವಾಗಿದೆ ಎಂದು ಪರಿಗಣಿಸಿ ಆದೇಶ

ಮಾಡಿರುತ್ತಾರೆಂದು, ಇವೆಲ್ಲವನ್ನು ಪರಿಗಣಿಸಿ ಅಪೀಲನ್ನು ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

5) ಉಭಯಪಕ್ಷಕಾರರು ಸಲ್ಲಿಸಿದ ಮೇಲ್ಮನವಿ ಹಾಗೂ ದಾಖಲೆಗಳ ಅಂಶಗಳನ್ನು ಪರಿಗಣಿಸಿ ಈ ಪ್ರಕರಣವನ್ನು ವಾದವಿವಾದಕ್ಕೆ ಮುಂದೂಡಲಾಗಿತ್ತು. ಅದರಂತೆ ಅಪೀಲುದಾರರ ಪರ ಅಧಿಕೃತ ಪ್ರತಿನಿಧಿಯವರು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಅದೇ ರೀತಿ ಒಂದನೇ ಪ್ರತಿವಾದಿ ಸಹ ಖುದ್ದು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಪರ ವಾದವನ್ನು ಮಂಡಿಸಿರುತ್ತಾರೆ ಹಾಗೂ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

6) ಉಭಯಪರ ವಾದವಿವಾದಗಳನ್ನು ಕೇಳಿರುತ್ತೇನೆ ಹಾಗೂ ಕಡತದ ಪರಿಶೀಲನೆಯನ್ನು ಮಾಡಿರುತ್ತೇನೆ.

7) ಈ ಹಂತದಲ್ಲಿ ಮೇಲ್ಮನವಿಯ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳು ಮೂಡಿಬರುತ್ತವೆ: -

i. **<u>ಅಂಶ (i): -</u>** ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ಹುಬ್ಬಳ್ಳಿ ರವರು ದಿನಾಂಕ 27.04.2022, ಪ್ರಕರಣ ಸಂಖ್ಯೆ: 24/2022-23, ಆದೇಶ ಸಂಖ್ಯೆ: ಅಇಂ(ವಿ)/ಕಾನಿಇಂ(ಕ)/ಸಕಾನಿಇಂ(ಕ)/22-23/ CYS-25 ಪ್ರಕರಣದಲ್ಲಿ ಹೊರಡಿಸಿರುವ ಆದೇಶವು ನಿರಂಕುಶ ಹಾಗೂ ಕಾನೂನು ಬಾಹಿರವಾಗಿರುತ್ತದೆಂದು ಮೇಲ್ಮನವಿದಾರರು ಸಾಬೀತುಪಡಿಸಿರುತ್ತಾರೆಯೇ?

ii. **<u>ಅಂಶ (ii): -</u>** ಏನು ಆದೇಶ?

8) ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ರೀತಿ ಉತ್ತರಿಸಿದ್ದೇನೆ.

i. **ಅಂಶ (i)** – ನಕಾರಾತ್ಮಕವಾಗಿ

ii. **ಅಂಶ (ii)** – ಕಡೆಯ ಆದೇಶದಂತೆ

## ಕಾರಣಗಳು

9) **ಅಂಶ (i):** ವಾದವಿವಾದದ ಸಮಯದಲ್ಲಿ ಅಪೀಲುದಾರ ಪರ ಹಾಜರಾಗಿದ್ದ ಪ್ರತಿನಿಧಿರವರು ತಮ್ಮ ವಾದವನ್ನು ಮಂಡಿಸುತ್ತಾ ಅಪೀಲುದಾರರು ತಮ್ಮ ಕಟ್ಟಡಕ್ಕೆ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಕುವೆಂಪುನಗರ, ಕಾರ್ಯ ಮತ್ತು ಪಾಲನ ಉಪವಿಭಾಗ, ಸೆಸ್ಕಾಂ, ಮೈಸೂರು ಇಲ್ಲಿಂದ ಪಡೆದುಕೊಂಡಿದ್ದರೆಂದು ಇದರ RR No. KATP 16850 ಆಗಿರುತ್ತದೆಂದು ಆ ಸಮಯದಲ್ಲಿ ಒಂದನೇ ಎದುರುದಾರರು ನೀಡಿದ ವಿದ್ಯುತ್ ಮಂಜೂರಾತಿ ಪತ್ರದಲ್ಲಿ ಅಪೀಲುದಾರರು ರೂ. 6,993/-ಗಳನ್ನು MSDಯಾಗಿ ಪಾವತಿಸುವಂತೆ ತಿಳಿಸಿದ್ದರೆಂದು, ಆದರೇ ಈ ರೀತಿ MSD ಪಾವತಿ ಮಾಡಲು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಯಾವುದೇ ನಿಯಮಾವಳಿ ಇರುವುದಿಲ್ಲವೆಂದು ಅಷ್ಟೇ ಅಲ್ಲದೇ ಒಂದನೇ ಎದರುದಾರರು ತಾವು ಸಲ್ಲಿಸಿದ ಆಕ್ಷೇಪಣೆಗೆ ಪ್ರತಿಯಾಗಿ OP No. 34/2015ರಲ್ಲಿ ಮಾಡಲಾದ ಆದೇಶವನ್ನು ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕಾಂ) ನಿಗಮ ಕಛೇರಿ ಮೈಸೂರುರವರು ದಿನಾಂಕ 26.02.2019ರಂದು ಹೊರಡಿಸಿದ ಸುತ್ತೋಲೆಯನ್ನು ಆಧರಿಸಿ ಆ ಮೂಲಕ MSD ಹಣವನ್ನು ಪಾವತಿ ಮಾಡುವಂತೆ ತಿಳಿಸಿರುತ್ತಾರೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ಇದರಿಂದ ನೊಂದು ತಾವು ಮೂರನೇ ಎದುರುದಾರರ ಮುಂದೆ ದೂರನ್ನು ಸಲ್ಲಿಸಿದ್ದರೂ ಸಹ ಮೂರನೇ

ಎದುರುದಾರರು ನಿಯಮಾವಳಿಗಳ ಪರಿಶೀಲನೆ ಮಾಡದೇ ಪ್ರಶ್ನಿತ ಆದೇಶವನ್ನು ಹೊರಡಿಸಿರುತ್ತಾರೆಂದು, ಆದ್ದರಿಂದ ಅಪೀಲನ್ನು ಸಲ್ಲಿಸಿರುತ್ತೇವೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು OP No. 34/2015ರಲ್ಲಿ ಬೆಸ್ಕಾಂ ಮಾತ್ರವೇ ಪಕ್ಷಕಾರ ಆಗಿರುತ್ತದೆಂದು ಒಂದು ವೇಳೆ ಈ ಆದೇಶವನ್ನು ಪಾಲನೆ ಮಾಡಲೇಬೇಕಾಗಿದ್ದಲ್ಲಿ ಅದು ಬೆಸ್ಕಾಂ ವ್ಯಾಪ್ತಿಯಡಿ ಬರುವಂತಹ ಅಧಿಕಾರಿಗಳು, ಗ್ರಾಹಕರು ಹಾಗೂ ಗ್ರಾಹಕ ಕುಂದುಕೊರತೆಗಳ ನಿವಾರಣಾ ವೇದಿಕೆಗಳಿಗೆ ಮಾತ್ರ ಅನ್ವಯಿಸುತ್ತದೆಂದೂ, ಸೆಸ್ಕಾಂ ಅಡಿಯಲ್ಲಿ ಬರುವ ಅಧಿಕಾರಿಗಳಿಗಾಗಲೀ, ಗ್ರಾಹಕರಿಗಾಗಲೀ ಹಾಗೂ ಗ್ರಾಹಕ ವೇದಿಕೆಗಳಿಗಾಗಲೀ ಸಂಬಂಧ ಪಡುವುದಿಲ್ಲವೆಂದು ನುಡಿದಿರುತ್ತಾರೆ, ಮತ್ತು ಸೆಸ್ಕಾಂ ನಿಗಮ ಕಛೇರಿಯವರು ಹೊರಡಿಸಿದ ಸುತ್ತೋಲೆಯು ಕೂಡ ನಿಯಮಕ್ಕನುಸಾರವಾಗಿ ಇಲ್ಲವೆಂದು, ಆದ್ದರಿಂದ ಸದರಿ ಸುತ್ತೋಲೆಯನ್ನು ರದ್ದು ಮಾಡಬೇಕೆಂದು ಈ ಬಗ್ಗೆ ತಾವು ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರಿಗೆ ಪತ್ರ ಮುಖೇನ ಮನವಿ ಸಲ್ಲಿಸಿ ಗ್ರಾಹಕರಿಗೆ ತೊಂದರೆ ಉಂಟಾಗದಂತೆ ನೋಡಿಕೊಳ್ಳಲು ಕೇಳಿಕೊಂಡಿದ್ದೆವೆಂದು, ಆದರೇ ಕಾರ್ಯದರ್ಶಿರವರು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಆದ್ದರಿಂದ ಅಪೀಲನ್ನು ಪುರಸ್ಕರಿಸಬೇಕೆಂದೂ ಹಾಗೂ ಮೂರನೇ ಎದುರುದಾರರು ಹೊರಡಿಸಿದ ಆದೇಶವನ್ನು ತೆರವುಗೊಳಿಸಬೇಕೆಂದು ಪ್ರಾರ್ಥನೆ ಮಾಡಿರುತ್ತಾರೆ. ತಮ್ಮ ವಾದಕ್ಕೆ ಪೂರಕವಾಗಿ ದಿನಾಂಕ 26.02.2019ರಂದು ಸೆಸ್ಕಾಂರವರು ಹೊರಡಿಸಿದ ಸುತ್ತೋಲೆಯ ನಕಲು ಪ್ರತಿಯನ್ನು, ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಮೈಸೂರು ರವರು ದಿನಾಂಕ 27.04.2022ರಂದು ಹೊರಡಿಸಿದ ಆದೇಶದ ನಕಲನ್ನು, ದಿನಾಂಕ 30.01.2018ರಂದು OP No. 89/2017ರಲ್ಲಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರು ಹೊರಡಿಸಿದ ಆದೇಶದ ನಕಲನ್ನು, ದಿನಾಂಕ 02.06.2016ರಂದು OP No. 34/2015 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರು ಹೊರಡಿಸಿದ ಆದೇಶದ ನಕಲನ್ನು, ದಿನಾಂಕ 28.07.2021ರಂದು ಅಪೀಲುದಾರರು ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರಿಗೆ ಬರೆದ ಪತ್ರದ ನಕಲನ್ನು ಹಾಗೂ 17.11.2021ರಂದು ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರು ಅಪೀಲುದಾರ ಪ್ರತಿನಿಧಿಗೆ ಬರೆದ ಪತ್ರದ ನಕಲನ್ನು ಸಲ್ಲಿಸಿರುತ್ತಾರೆ.

10) ಒಂದನೇ ಎದುರುದಾರರು ತಮ್ಮ ವಾದವಿವಾದದ ಕಾಲದಲ್ಲಿ ತಾವು ಅಪೀಲುದಾರರ ಕೋರಿಕೆ ಮೇರೆಗೆ ಸದರಿಯವರ ಕಟ್ಟಡಕ್ಕೆ ದಿನಾಂಕ 21.02.2022ರಂದು LT-7 ಜಕಾತಿ ಅಡಿಯಲ್ಲಿ ತಾತ್ಕಾಲಿಕ ಸ್ಥಾವರ ಸಂಖ್ಯೆ KATP 16850 ವಿದ್ಯುತ್ ಸಂಪರ್ಕವನ್ನು ಒದಗಿಸಿಕೊಟ್ಟಿದ್ದಾಗಿ ಹಾಗೂ ಸದರಿ ಸ್ಥಾವರವು ಹೊಸ ಸ್ಥಾವರವಾಗಿದ್ದ ಕಾರಣ Conditions of Supply of Electricity of Distribution Licensees in the State of Karnataka, Clause ನಿಯಮಾವಳಿ 30.04ರ ಅನ್ವಯ ಮೀಟರ್ ಸೆಕ್ಯೂರಿಟಿ ಡೆಪಾಸಿಟ್ ರೂಪದಲ್ಲಿ ರೂ. 6,993/-ಗಳನ್ನು MSDಯಾಗಿ ಪಾವತಿಸುವಂತೆ ತಿಳಿಸಿದ್ದೆವೆಂದು, ಆದರೇ ಈವರೆಗೂ ಸದರಿಯವರು ಪಾವತಿ ಮಾಡಿಲ್ಲವೆಂದು, ಅಷ್ಟೇ ಅಲ್ಲದೇ ಮೂರನೇ ಎದುರುದಾರರು ದೂರು ಸಂಖ್ಯೆ 24/2022-23ಯಲ್ಲಿ ಹೊರಡಿಸಿದ ಆದೇಶದ ಅನ್ವಯ ರೂ. 6,993/-ಗಳನ್ನು MSDಯಾಗಿ ಪಾವತಿಸಬೇಕಾಗಿತ್ತೆಂದು, ಆದರೇ ಸದರಿ ಹಣವನ್ನು ಪಾವತಿ ಮಾಡದೇ ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತಾರೆಂದು, Conditions of Supply of Electricity of Distribution Licensees in the State of Karnataka

ನಿಯಮಾವಳಿಗಳ ಅಡಿಯಲ್ಲಿ MSD ಪಾವತಿ ಮಾಡಲು ತಾವು ಸೂಚನೆ ಕೊಟ್ಟಿದ್ದೆವೆಂದು, ಆದ್ದರಿಂದ ಪ್ರಸ್ತುತ ಅಪೀಲು ಊರ್ಜಿತ ಅಲ್ಲವೆಂದು ವಜಾ ಮಾಡಬೇಕಾಗುತ್ತದೆಂದು ನುಡಿದಿರುತ್ತಾರೆ. ತಮ್ಮ ವಾದಕ್ಕೆ ಪೂರಕವಾಗಿ ದಿನಾಂಕ 05.03.2022 ಹಾಗೂ 21.03.2022ರಂದು ಅಪೀಲುದಾರರಿಗೆ ಮತ್ತು ಅವರ ಪ್ರತಿನಿಧಿಯವರಿಗೆ ಬರೆದ ಪತ್ರದ ನಕಲುಗಳನ್ನು, ದಿನಾಂಕ 26.02.2019ರಂದು ಸೆಸ್ಕಾಂರವರು ಹೊರಡಿಸಿದ ಸುತ್ತೋಲೆಯ ನಕಲನ್ನು ಹಾಗೂ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಮೈಸೂರು ರವರು ದಿನಾಂಕ 27.04.2022ರಂದು ಹೊರಡಿಸಿದ ಆದೇಶದ ನಕಲನ್ನು ಸಲ್ಲಿಸಿರುತ್ತಾರೆ.

11) ಮೇಲ್ಕಂಡ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ ಕಂಡುಬರುವುದೇನೆಂದರೇ, ಅಪೀಲುದಾರರು ಮೈಸೂರು, ಕುವೆಂಪು ನಗರ, ಕೆ.ಹೆಚ್.ಬಿ ಕಾಲೋನಿಯಲ್ಲಿರುವ ಕಟ್ಟಡ ಸಂಖ್ಯೆ 203/ಬಿ ಇದಕ್ಕೆ ಒಂದನೇ ಎದುರುದಾರ ಕಛೇರಿಯಿಂದ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ನೀಡುವಂತೆ ಕೋರಿಕೊಂಡಿದ್ದರೆಂದು, ಅದಕ್ಕನುಸಾರವಾಗಿ ಒಂದನೇ ಎದುರುದಾರರು RR No. KATP 16850 ಎಂಬ ಸ್ಥಾವರ ಸಂಖ್ಯೆಯನ್ನು ನೀಡಿ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಸಹ ನೀಡಿದ್ದರೆಂದು, ಈ ರೀತಿ ನೀಡಿದ ಮಂಜೂರಾತಿ ಪತ್ರದಲ್ಲಿ ರೂ. 6,993/-ಗಳನ್ನು MSD ಪಾವತಿಸುವಂತೆ ತಿಳಿಸಿದ್ದರೆಂದು ಇದಕ್ಕೆ ಅಪೀಲುದಾರರು ಆಕ್ಷೇಪಿಸಿದ್ದರೆಂದು ಕಂಡುಬರುತ್ತದೆ.

12) ಅಪೀಲುದಾರರ ಆಕ್ಷೇಪಣೆ ಏನೆಂದರೇ, ಒಂದನೇ ಎದುರುದಾರರು ಯಾವುದೇ ನಿಯಮಾವಳಿಗಳನ್ನು ಪಾಲನೇ ಮಾಡದೇ ದಿನಾಂಕ 05.03.2022ರಂದು ಒಂದು ಪತ್ರವನ್ನು ಬರೆಯುತ್ತಾ ಆ ಮೂಲಕ ತಮ್ಮ

ಆಕ್ಷೇಪಣೆಯನ್ನು ತಿರಸ್ಕರಿಸಿದ್ದಾರೆಂದು, ಈ ರೀತಿ ಒಂದನೇ ಎದುರುದಾರರು Conditions of Supply of Electricity of Distribution Licensees in the State of Karnatakaಗಳಲ್ಲಿನ ನಿಯಮಾವಳಿಗಳನ್ನು ಉಲ್ಲಂಘಿಸಿದ್ದಾರೆ ಎಂಬುದಾಗಿರುತ್ತದೆ.

13) ಈ ಹಂತದಲ್ಲಿ ನಿಯಮಾವಳಿ 12.00 ಹಾಗೂ 30.04ನ Conditions of Supply of Electricity of Distribution Licensees in the State of Karnataka ಪರಿಶೀಲಿಸಿದ್ದೇನೆ, ಅವುಗಳು ಈ ಕೆಳಗಿನಂತೆ ಇರುತ್ತದೆ: -

> ***12.00 PROCEDURE FOR ARRANGING POWER SUPPLY ON TEMPORARY BASIS***
> ***All Temporary power supply installations shall be serviced only with a Meter.***
> *Any person desirous of availing himself of temporary power supply shall comply with the following requirements:*
>
> ***30.04 METER SECURITY DEPOSIT (MSD)***
> *Meter security deposit is payable at the time of servicing of all new installations towards the meter / metering equipment at the rates as per schedule of rates prescribed by the Licensee from time to time except in respect of BJ/KJ installations and I.P Set installations up to and inclusive of 10 H.P. Under LT 4(a) category.*
>
> *In respect of existing installations where MSD is not collected, MSD shall be collected at the prevailing schedule of rates whenever the meter is replaced.*

ಇದರ ಪ್ರಕಾರ ಎಲ್ಲಾ ತಾತ್ಕಾಲಿಕ ವಿದ್ಯುತ್ ಸರಬರಾಜು ಅನುಸ್ಥಾಪನೆಗಳನ್ನು ಮೀಟರನ್ನು ಅಳವಡಿಸುವುದರ ಮೂಲಕವೇ ಸ್ಥಾಪಿಸಬೇಕಾಗುತ್ತದೆ. ಅದೇ ರೀತಿ BJ/KJ ಅನುಸ್ಥಾಪನೆಗಳನ್ನು ಹಾಗೂ I.P ಸೆಟ್ ಸ್ಥಾಪನೆಗಳನ್ನು ಹೊರತುಪಡಿಸಿ, ಕಾಲಕಾಲಕ್ಕೆ ಪರವಾನಗಿದಾರರು ನಿಗದಿಪಡಿಸಿದ ದರಗಳ ಪಟ್ಟಿಯ ಪ್ರಕಾರ ಮೀಟರ್ / ಮೀಟರಿಂಗ್ ಉಪಕರಣಗಳಿಗೆ ಎಲ್ಲಾ ಹೊಸ ಸ್ಥಾಪನೆಗಳ ಸೇವೆಯ ಸಮಯದಲ್ಲಿ

ಮೀಟರ್ ಭದ್ರತಾ ಠೇವಣಿ ಪಾವತಿಸಬೇಕಾಗುತ್ತದೆ. ಒಂದು ವೇಳೆ ಮೀಟರ್ ಭದ್ರತಾ ಠೇವಣಿಯನ್ನು ಸಂಗ್ರಹಿಸದಿರುವ ಆದರೇ ಅಸ್ತಿತ್ವದಲ್ಲಿರುವ ಅನುಸ್ಥಾಪನೆಗಳಿಗೆ ಸಂಬಂಧಿಸಿದಂತೆ, ಮೀಟರ್ ಅನ್ನು ಬದಲಾಯಿಸಿದಾಗಲೆಲ್ಲಾ ಚಾಲ್ತಿಯಲ್ಲಿರುವ ಮೀಟರ್ ಭದ್ರತಾ ಠೇವಣಿಯ ದರವನ್ನು ಸಂಗ್ರಹಿಸಬೇಕಾಗುತ್ತದೆ.

14) ಇದರ ಪ್ರಕಾರ ಪ್ರಸ್ತುತ ಪ್ರಕರಣದಲ್ಲಯೂ ಸಹ ಒಂದನೇ ಎದುರುದಾರರು ಅಪೀಲುದಾರ ಕೋರಿಕೆ ಮೇರೆಗೆ ತಾತ್ಕಾಲಿಕ ಸ್ಥಾವರ ಸಂಖ್ಯೆ KATP 16850, LT-7 ಜಕಾತಿಯಡಿಯಲ್ಲಿ ಹೊಸ ಸ್ಥಾವರವನ್ನು ನೀಡಿದ್ದು ಇದಕ್ಕೆ ಸಂಬಂಧಿಸಿದಂತೆ ನಿಬಂಧನೆ 30.04ರ ಅನ್ವಯ Meter Security Deposit ಮೊತ್ತವನ್ನು ಪಾವತಿಸುವಂತೆ ಸೂಚಿಸಿರುವುದು ಕ್ರಮಬದ್ಧವಾಗಿದೆ ಎಂದು ತೀರ್ಮಾನಿಸಬೇಕಾಗುತ್ತದೆ. ಆದ್ದರಿಂದ ಒಂದನೇ ಎದುರುದಾರರು Conditions of Supply of Electricity of Distribution Licensees in the State of Karnatakaನ ನಿಯಮಾವಳಿಗಳನ್ನು ಪಾಲಿಸದೇ ನೋಟೀಸ್‌ಗಳನ್ನು ನೀಡಿದ್ದಾರೆ ಎಂದು ಆಕ್ಷೇಪಿಸಿರುವುದನ್ನು ಒಪ್ಪಲಾಗುವುದಿಲ್ಲ.

15) ಅಪೀಲುದಾರರ ಮತ್ತೊಂದು ಆಕ್ಷೇಪಣೆ ಏನೆಂದರೇ ಒಂದನೇ ಎದುರುದಾರರು OP No. 34/2015ರಲ್ಲಿ ದಿನಾಂಕ 02.06.2016ರಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರು ನೀಡಲಾದ ಆದೇಶವನ್ನು ಆಧರಿಸಿ MSD ಪಾವತಿ ಮಾಡುವಂತೆ ನೋಟೀಸು ಕೊಟ್ಟಿರುತ್ತಾರೆಂದು, ಆದರೇ ಸದರಿ ಪ್ರಕರಣದಲ್ಲಿ ಸೆಸ್ಕಾಂ ಪಕ್ಷಕಾರ ಆಗಿರುವುದಿಲ್ಲವೆಂದು, ಆದ್ದರಿಂದ ಸದರಿ ಆದೇಶವು ಬೆಸ್ಕಾಂಗೆ ಮಾತ್ರ ಅನ್ವಯಿಸುತ್ತಿದ್ದು ಸೆಸ್ಕಾಂಗೆ ಅನ್ವಯಿಸುವುದಿಲ್ಲವೆಂದು ನುಡಿದಿದ್ದಾರೆ. ಮತ್ತೆ ಮುಂದುವರೆದು OP 89/2017ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ

ಆಯೋಗವು ದಿನಾಂಕ 30.01.2018ರಂದು ಆದೇಶವನ್ನು ಹೊರಡಿಸಿರುತ್ತದೆಂದು ಅದರಂತೆ ಸದರಿ ಪ್ರಕರಣದ ಅರ್ಜಿದಾರರು (ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂ) Meter Rental Chargesನ್ನು ಮಾತ್ರ LT-7 ಗ್ರಾಹಕರಿಂದ ಪಡೆಯಬಹುದಾಗಿರುತ್ತದೆಂದು, ಆದರೂ ಕೂಡ ಒಂದನೇ ಎದುರುದಾರರು ದಿನಾಂಕ 26.02.2019ರಂದು ಸೆಸ್ಕಾಂ ಹೊರಡಿಸಿದ ಸುತ್ತೋಲೆಯ ಪ್ರಕಾರ ರೂ. 6,993/-ಗಳನ್ನು MSDಯಾಗಿ ಪಾವತಿಸುವಂತೆ ಹೇಳಿರುವುದು ನ್ಯಾಯೋಚಿತವಾಗಿಲ್ಲವೆಂದು ನುಡಿದಿರುತ್ತಾರೆ.

16) OP No. 34/2015ರ ಆದೇಶವನ್ನು ಪರಿಶೀಲಿಸಿದ್ದೇನೆ, ಇದರಲ್ಲಿ ಬೆಸ್ಕಾಂ ಅಧಿಕಾರಿಗಳು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಅರ್ಜಿಯನ್ನು ಸಲ್ಲಿಸಿ ಆ ಮೂಲಕ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯುವಂತಹ LT-7 ವರ್ಗದ ಗ್ರಾಹಕರಿಂದ Security Deposit ಹಾಗೂ Meter Rental Chargesನ್ನು ಪಾವತಿಸಿಕೊಳ್ಳಲು ಅನುಮತಿಯನ್ನು ಕೋರಿದ್ದು, ಈ ಅರ್ಜಿಯನ್ನು ಪರಿಶೀಲಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಕೆಳಗಿನಂತೆ ಅವಲೋಕಿಸಿ ತದನಂತರ ಅಂತಿಮ ಆದೇಶವನ್ನು ಹೊರಡಿಸಿರುತ್ತದೆ: -

> *(c) The duration of the LT-7 category temporary power supply installations varies from one day to several months. The Meter fixed in such installations are exposed to greater wear and tear, considering the fact that they would be used for short durations for different installations. The Petitioner has to incur the cost for purchase of these Pre-paid Meters, therefore, it is essential to allow the Petitioner to collect the Security Deposit and monthly Rental Charges in respect of Pre-paid Meters provided by it.*
>
> *(d) The average life of a Meter may be taken as three years (144 weeks), considering the wear and tear, downtime and handling issues in transit. Therefore, the Meter Rental Charges in respect of the Single-*

*Phase Meters is estimated at Rs. 75/- per week and for the Three Phase Meters at Rs.100/- per week.*

4) *We find that there is no specific Regulation framed or Order passed by this Commission authorizing the Distribution Licensee to collect Rental or other Charges in respect of any electric Meter provided by the Distribution Licensee. The learned counsel for the Petitioner has also not pointed out any such Regulation or Order in this regard. However, Meter Security Deposit is payable by the Consumer as prescribed under the Schedule of Rate fixed by the Distribution Licensee from time to time, as provided in Clause 30.04 of the CoS. We are of the view that Clause 30.04 of the CoS is applicable even to temporary power supply installations. Therefore, there is no difficulty in holding that the Petitioner is entitled to claim Meter Security Deposit even in the case of temporary power supply.*

(a) *Sub-Section (1) of Section 55 of the Act reads thus:*

> *"55. Use, etc., of meters, - (1) No licensee shall supply electricity, after the expiry of two years from the appointed date, except through installations of a correct meter in accordance with the regulations to be made in this behalf by the Authority:*
>
> *Provided that the licensee may require the consumer to give him security for the price of a meter and enter into an agreement for the hire thereof, unless the consumer elects to purchase a meter.*
>
> *Provided FURTHER that the State Commission may, by notification, extend the said period of two years for a class or classes of persons or for such area as may be specified in that notification."*

*The first Proviso to Sub-Section (1) of Section 55 of the Act authorizes the Distribution Licensee to require the Consumer to furnish security for the price of that meter and enter into an agreement for the hire thereof, unless the Consumer elects to purchase a Meter. Therefore, whenever an electric Meter is provided by the Distribution Licensee, the Consumer has to furnish security for the price of that Meter and*

*he is also liable to pay the Rental Charges, unless he elects to purchase the electric Meter on his own.*

***ORDER***

*The Petitioner is permitted to collect the Security Deposit and the Meter Rental Charges for Pre-paid Meters fixed by the Petitioner to its Consumer for temporary power supply under LT-7 category as under:*

| | |
|---|---|
| *LT installations for a period upto 7 days.* | *No Meter Security Deposit or Meter Rental Charges* |
| *LT-7 installations for a period in excess of 8 days upto 56 days.* | *Meter Rental Charges at Rs.75/- (Seventy-Five) per week.* |
| *LT-7 installations for a period in excess of 57 days* | *Meter Security Deposit equivalent to the cost of the Meter and Meter Rental Charges at Rs.75/- (Seventy-Five) per week.* |

17) OP No. 89/2017ರಲ್ಲಿನ ಆದೇಶವನ್ನು ಪರಿಶೀಲನೆ ಮಾಡಿದಾಗ, ಇದರಲ್ಲಿನ ಅರ್ಜಿದಾರರು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಅರ್ಜಿಯನ್ನು ಸಲ್ಲಿಸಿ ಆ ಮೂಲಕ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯುವಂತಹ LT-7 ವರ್ಗದ ಗ್ರಾಹಕರಿಂದ Meter Rental Chargesನ್ನು ಪಾವತಿಸಿಕೊಳ್ಳಲು ಅನುಮತಿಯನ್ನು ಕೋರಿರುತ್ತಾರೆ, ಈ ಅರ್ಜಿಯನ್ನು ಪರಿಶೀಲಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ತನ್ನ ಆದೇಶದಲ್ಲಿ OP No. 34/2015ರಲ್ಲಿ ಅವಲೋಕಿಸಲಾದ ಕಾನೂನು ಅಂಶಗಳನ್ನು ಪುನಃರುಚ್ಚರಿಸಿರುತ್ತದೆ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ Jantia Hill Truck Owners Association Vs Shailang Area Coal Dealers and Truck Owners Association, (2009) 8 SCC 492 ತೀರ್ಪನ್ನು ಆಧರಿಸಿರುತ್ತದೆ, ಸದರಿ ತೀರ್ಪಿನಲ್ಲಿ ಈ ಕೆಳಕಂಡಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅವಲೋಕಿಸಿರುತ್ತದೆ: -

*The Hon'ble Supreme Court, in the case of Jantia Hill Truck Owners Association – Vs- Shailang Area Coal*

*Dealers and Truck Owners Association and others reported in* ***(2009) 8 SCC 492*** *has held thus:*

> *'Even in a case where the Statute provides for certain things to be done, subject to rules, any action taken without framing the rules would not render that action invalid. If a statute is workable even without framing of the rules, the same has to be given effect to. The law itself, except in certain situations, does not envisage vacuum.'*

*The above principle laid down by the Hon'ble Supreme Court makes it clear that, even in the absence of Regulations, the Distribution can be allowed to collect the Rental Charges for providing electric Meter, if it is workable. Any of the Regulations or the provisions in the Act does not prohibit to collect the Meter Rental Charges for the electric Meters supped by the Distribution Licensee. As noted above in the first proviso to Sub-Section (1) of Section 55 of the Act, the Consumer is under an obligation to furnish the Meter Security for the price of a Meter and also to pay the hire towards the Meter supplied by the Distribution Licensee, unless he elects to purchase the Meter."*

18) ಈ ರೀತಿ ಮೇಲೆ ಉಲ್ಲೇಖಿಸಲಾದ OP No. 34/2015 ಹಾಗೂ OP No. 89/2017ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, ವಿದ್ಯುತ್ ಕಾಯ್ದೆ 2003, ಕಲಂ 55, ಹಾಗೂ ನಿಯಮಾವಳಿ 34.04ನ Conditions of Supply of Electricity of Distribution Licensees in the State of Karnatakaಗಳಲ್ಲಿನ ಅಂಶಗಳನ್ನು ಆಧರಿಸಿ, ಅಷ್ಟೇ ಅಲ್ಲದೇ ಈ ಎರಡೂ ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಸಹ ಆಧರಿಸಿ ಅಂತಿಮ ಆದೇಶವನ್ನು ಹೊರಡಿಸಿರುತ್ತಾರೆ, ಆದ್ದರಿಂದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಹೊರಡಿಸಿರುವ ತೀರ್ಪುಗಳನ್ನು "ವ್ಯಕ್ತಿಗತ" (In-personem) ಎಂಬುದಾಗಿ ಪರಿಗಣಿಸಲು ಸಾಧ್ಯವಿಲ್ಲ. ಆದ್ದರಿಂದ ಅಪೀಲುದಾರ ಪ್ರತಿನಿಧಿಯವರು ವಾದವಿವಾದದಲ್ಲಿ ನುಡಿದಂತೆ

OP No. 34/2015ನ್ನು ಕೇವಲ ಬೆಸ್ಕಾಂ ವ್ಯಾಪ್ತಿಗೆ ಒಳಪಡುತ್ತದೆಂದು ಅದೇ ರೀತಿ OP No. 89/2017ರಲ್ಲಿನ ಆದೇಶವು Meter Rental Chargesಗೆ ಮಾತ್ರ ಸೀಮಿತವಾಗುತ್ತದೆಂದು ಪರಿಗಣಿಸಲು ಸಾಧ್ಯವಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ನೀಡಲಾದ ಮಾರ್ಗ ಸೂಚಿಗಳನ್ನು ಪಾಲಿಸಬೇಕಾಗುತ್ತದೆ. ಈ ಕಾರಣಗಳಿಂದ ಅಪೀಲುದಾರರ ಈ ಆಕ್ಷೇಪಣೆಯನ್ನು ಸಹ ಒಪ್ಪಲಾಗುವುದಿಲ್ಲ.

19) ವಾದವಿವಾದದ ಕಾಲದಲ್ಲಿ ಅಪೀಲುದಾರ ಪ್ರತಿನಿಧಿಯವರು ದಿನಾಂಕ 26.02.2019ರಂದು ಸೆಸ್ಕಾಂ ನಿಗಮ ಕಛೇರಿಯಿಂದ ಹೊರಡಿಸಲಾದ ಸುತ್ತೋಲೆಯು OP No. 34/2015 ಹಾಗೂ OP No. 89/2017ಗಳಲ್ಲಿನ ಆದೇಶಗಳನ್ನು ಆಧರಿಸಿ ಹೊರಡಿಸಿರುವುದರಿಂದ, ಈ ಸುತ್ತೋಲೆ ಸಹ ನಿಯಮಗಳಿಗೆ ವಿರುದ್ಧವಾಗಿದೆಯೆಂದು ಸದರಿ ಸುತ್ತೋಲೆಯನ್ನು ರದ್ದು ಮಾಡಲು ಆದೇಶಿಸಬೇಕೆಂದು ಕೋರಿಕೊಂಡಿರುತ್ತಾರೆ. ಮತ್ತೆ ಮುಂದುವರೆದು ಈ ಬಗ್ಗೆ ತಾವು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರಿಗೆ ಪತ್ರ ಮುಖೇನ ಕೋರಿಕೊಂಡರೂ ಕೂಡ ಯಾವುದೇ ಪ್ರಯೋಜನ ಉಂಟಾಗಿಲ್ಲವೆಂದು, ಅವರು ತಮ್ಮ ಮನವಿಯನ್ನು ತಿರಸ್ಕರಿಸಿದ್ದರೆಂದು ನುಡಿದಿರುತ್ತಾರೆ. ಇದಕ್ಕೆ ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಿದ್ದೇನೆ, ಈ ಪ್ರಾಧಿಕಾರಕ್ಕೆ ಮೇಲೆ ಹೇಳಿದಂತಹ ಸುತ್ತೋಲೆಯನ್ನು ರದ್ದುಪಡಿಸುವಂತಹ ಅಧಿಕಾರ ಇರುವುದಿಲ್ಲ, ಒಂದು ವೇಳೆ ಅಪೀಲುದಾರರು ಸದರಿ ಸುತ್ತೋಲೆಯ ಕ್ರಮಬದ್ಧತೆಯನ್ನು ಪ್ರಶ್ನಿಸಬೇಕಾದರೇ ಸೂಕ್ತ ನ್ಯಾಯಾಲಯವನ್ನೇ ಸಂಪರ್ಕಿಸಬೇಕಾಗುತ್ತದೆ, ಆದ್ದರಿಂದ ಅಪೀಲುದಾರರ ಈ ವಾದಾಂಶಗಳಿಗೆ ಸಂಬಂಧಪಟ್ಟಂತೆ ಯಾವುದೇ ಅಭಿಪ್ರಾಯಗಳನ್ನು ಈ ಪ್ರಾಧಿಕಾರವು ನೀಡಲು

ಸಾಧ್ಯವಿರುವುದಿಲ್ಲ, ಇವೆಲ್ಲವನ್ನು ಕೂಲಂಕುಶವಾಗಿ ಮೂರನೇ ಎದುರುದಾರರು/ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಮೈಸೂರು, ಅವಲೋಕಿಸಿಲ್ಲವಾದರೂ ಸಹ ನ್ಯಾಯಬದ್ಧ ಆದೇಶವನ್ನು ಹೊರಡಿಸಿರುತ್ತಾರೆ. ಈ ಎಲ್ಲಾ ಕಾರಣಗಳಿದ ಮೂರನೇ ಎದುರುದಾರರು ಪ್ರಶ್ನಿತ ಆದೇಶದಲ್ಲಿ ನೀಡಿರುವ ತೀರ್ಪು ಕಾನೂನು ಅನ್ವಯ ಸಮಂಜಸವಾಗಿದ್ದು ಅದರಲ್ಲಿ ಈ ಪ್ರಾಧಿಕಾರದ ಹಸ್ತಕ್ಷೇಪದ ಅಗತ್ಯ ಇರುವುದಿಲ್ಲವೆಂದು ಅಭಿಪ್ರಾಯ ಪಡುತ್ತಾ, ಅಪೀಲುದಾರರು ಸಲ್ಲಿಸಿರುವ ಮೇಲ್ಕಂಡ ಅಪೀಲು ಅರ್ಜಿಯು ಊರ್ಜಿತವಾಗತಕ್ಕದ್ದಲ್ಲವೆಂದು ನಿರ್ಧರಿಸಿರುತ್ತೇನೆ ಹಾಗೂ ಒಂದನೇ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

20) **<u>ಅಂಶ (ii): -</u>** ಈಗಾಗಲೇ ಈ ಮೇಲೆ ಅಂಶ 1ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

**ಸಂಖ್ಯೆ: OMB/C/G-491/2022/D-111** **ದಿನಾಂಕ: 26.08.2022**

# <u>ಆದೇಶ</u>

ಅಪೀಲನ್ನು ವಜಾಮಾಡಲಾಗಿದೆ.

ಪ್ರಕರಣ ಸಂಖ್ಯೆ: 24/2022-23, ಆದೇಶ ಸಂಖ್ಯೆ: ಅಇಂ(ವಿ)/ಕಾನಿಇಂ(ಕ)/ಸಕಾನಿಇಂ(ಕ)/22-23/CYS-25ರಲ್ಲಿ ಮೂರನೇ ಪ್ರತಿವಾದಿಯು ದಿನಾಂಕ 27.04.2022ರಂದು ಮಾಡಿರುವ ಆದೇಶವನ್ನು ಸ್ಥಿರಗೊಳಿಸಲಾಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಹಾಗೂ ಓಂಬಡ್ಸಮನ್) ನಿಯಮಗಳು 2004ರ, 22.7ರ ನಿಯಮಗಳ ಅಡಿಯಲ್ಲಿ ನಿಗದಿಪಡಿಸಲಾದ ನಿಬಂಧನೆಗಳನ್ನು ಅನುಸರಿಸಲು ಕಚೇರಿಗೆ ನಿರ್ದೇಶಿಸಲಾಗಿದೆ.

ಸಹಿ/-
(ಆರ್. ಶಾರದಾ)
ವಿದ್ಯುಚ್ಛಕ್ತಿ ಲೋಕಪಾಲರು

**<u>ಪ್ರತಿಯನ್ನು:</u>**

1. ಶ್ರೀಮತಿ ವೇದಾವತಿ,
   ನಂ. 203/ಬಿ, ಕೆ.ಹೆಚ್.ಬಿ. ಕಾಲೋನಿ,
   ಆರ್.ಎಮ್.ಪಿ. ಕ್ವಾರ್ಟರ್ಸ್ ಎದುರು,
   ಕುವೆಂಪುನಗರ,
   <u>ಮೈಸೂರು.</u>

2. ಶ್ರೀ ಸಿ. ಆರ್. ಅಶ್ವಥ್ ನಾರಾಯಣ,
   ಹಿಂದುಸ್ಥಾನ್ ಎಲೆಕ್ಟ್ರಿಕಲ್ಸ್,
   ಬಾಪು ಸುಬ್ಬರಾವ್ ರಸ್ತೆ,
   ಶಿವರಾಮಪೇಟೆ,
   <u>ಮೈಸೂರು – 570001.</u>

3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
   ಕಾರ್ಯ ಮತ್ತು ಪಾಲನ ಕುವೆಂಪುನಗರ ಉಪ ವಿಭಾಗ, ಸೆಸ್ಕಾಂ,
   ಜೋಡಿ ಬಸವ ರಸ್ತೆ,
   <u>ಮೈಸೂರು – 570023.</u>

4. ಜನರಲ್ ಮ್ಯಾನೇಜರ್ (Procurement),
   ಕಾರ್ಪೊರೇಟ್ ಕಛೇರಿ,
   ವಿಜಯನಗರ 2ನೇ ಹಂತ,
   <u>ಮೈಸೂರು – 570017.</u>

5. ಅಧ್ಯಕ್ಷರು,
   ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
   ಕಾರ್ಯ ಮತ್ತು ಪಾಲನ ವೃತ್ತ,
   ಜೋಡಿ ಬಸವ ರಸ್ತೆ, ಕುವೆಂಪುನಗರ,
   <u>ಮೈಸೂರು – 570023.</u>

6. ಮಾನ್ಯ ಅಧ್ಯಕ್ಷರು, ಕವಿನಿಆ ರವರ ಆಪ್ತ ಕಾರ್ಯದರ್ಶಿ
7. ಮಾನ್ಯ ಸದಸ್ಯರು (M), ಕವಿನಿಆ ರವರ ಆಪ್ತ ಕಾರ್ಯದರ್ಶಿ
8. ಮಾನ್ಯ ಸದಸ್ಯರು (R), ಕವಿನಿಆ ರವರ ಆಪ್ತ ಕಾರ್ಯದರ್ಶಿ
9. ಕಾರ್ಯದರ್ಶಿ, ಕವಿನಿಆ ರವರ ಆಪ್ತ ಸಹಾಯಕರು.